Regularisation of unauthorised culuivation of Government land by way of grant to eligible unauthorised cultivators is under active consideration of Government.

ರೋಣ ತಾಲ್ಲೂಕಿನ ನರೇಗಲ್ಲಿನಲ್ಲಿ ವಿದ್ಯುತ್ ಇಲಾಖೆಯ ಲೆಕ್ಕ ಪತ್ರ ಕಚೇರಿ (ಅಕೌಂಟ್ಸ್ ಆಫೀಸ್) ಪ್ರಾರಂಭಿಸುವ ಬಗ್ಗೆ

೨೭೨ (೮೮) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) ಮಾನ್ಯ ವಿದ್ಯುತ್ ಮತ್ತು ಭೂಗರ್ಭ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ರೋಣ ತಾಲ್ಲೂಕು ನರೇಗಲ್ಲಿನಲ್ಲಿ ವಿದ್ಯುತ್ ಇಲಾಖೆಯ ಲೆಕ್ಕಪತ್ರ ಶಾಖೆ (ಅಕೌಂಟ್ಸ್ ಆಫೀಸ್) ಎಲ್ಲಿಯವರೆಗೆ ಕೆಲಸ ಮಾಡುತ್ತಿತ್ತು ?

ಆ) ನರೇಗಲಿನಿಂದ ಸದರಿ ಲೆಕ್ಕಪತ್ರ ಶಾಖೆಯನ್ನು (ಅಕೌಂಟ್ಸ್ ಆಫೀಸ್) ವರ್ಗಾಯಿಸಿರುವುದರಿಂದ ನರೇಗಲ್ಲ ಭಾಗದ ರೈತರಿಗೆ ಹಾಗೂ ಗೃಹ ಬಳಕೆದಾರರಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ನರೇಗಲ್ಲಿನಲ್ಲಿ ಲೆಕ್ಕಪತ್ರ ಶಾಖೆಯನ್ನು ಪುನಃ ಪ್ರಾರಂಭಿಸುವ ಯೋಚನೆ ಸರಕಾರಕ್ಕಿದೆಯೆ ?

ಈ) ಹಾಗಿದ್ದಲ್ಲಿ, ಯಾವಾಗ ಲೆಕ್ಕಪತ್ರ ಶಾಖೆಯನ್ನು ಪುನಃ ಪ್ರಾರಂಭಿಸಲಾಗುವುದು?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂಗರ್ಭ ಮಂತ್ರಿಗಳು).—

ಅ) ನರೇಗಲ್ಲಿನಲ್ಲಿ ಮಂಡಳಿಯ ಲೆಕ್ಕಪತ್ರ ಶಾಖೆಯು ಮೇ ತಿಂಗಳು ೧೯೭೫ರ ವರೆಗೆ ಕೆಲಸ ಮಾಡುತ್ತಿತ್ತು.

ಆ) ಹೌದು. ಆದರೂ ನರೇಗಲ್ಲಿನ ಭಾಗದ ರೈತರಿಗೆ ಮತ್ತು ಗೃಹ ವಿದ್ಯುತ್ ಬಳಕೆದಾರರಿಗೆ ಹಣಪಾವತಿ ಮಾಡಲು ತೊಂದರೆ ಆಗದಂತೆ ನರೇಗಲ್ಲಿನಲ್ಲಿ ದಿನವೂ ಹಣ ಪಡೆಯುವ ವ್ಯವಸ್ಥೆ ಇದೆ ಮತ್ತು ಈ ಭಾಗದ ಲೆಕ್ಕಪತ್ರಗಳನ್ನು ಹತ್ತಿರದ ಗಜೇಂದ್ರಗಡ ಶಾಖೆಯಲ್ಲಿಡಲಾಗಿದೆ.

ಇ) ಈ ಬಗ್ಗೆ ಹಲವು ಅರ್ಜಿಗಳು ವಿದ್ಯುಚ್ಛಕ್ತಿ ಮಂಡಳಿಗೆ ಬಂದಿದ್ದು ಈ ವಿಚಾರ ಮಂಡಳಿಯ ಪರಿಶೀಲನೆಯಲ್ಲಿದೆ.

ಈ) ಈ ಶಾಖೆಯ ಪುನಃ ಪ್ರಾರಂಭಕ್ಕೆ ಬೇಕಾದ ವಿವರಗಳನ್ನು ಮಂಡಳಿಯು ಸಂಗ್ರಹಿಸುತ್ತಿದೆ. ಅಲ್ಲದೆ ಕೆಲಸದ ಒತ್ತಡ ಜಾಸ್ತಿಯಾಗಿ ಲೆಕ್ಕಪತ್ರ ವಿಭಾಗವನ್ನು ತೆಗೆಯುವ ಅವಶ್ಯಕತೆ ಬಿದ್ದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಂಪನ್ಮೂಲಗಳನ್ನು ಅನುಸರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಂದ ಮಾರಲ್ಪಟ್ಟ ಜಮೀನುಗಳನ್ನು ವಾಪಸ್ಸು ಕೊಡಿಸುವ ಬಗ್ಗೆ

೨೭೩ (೩೬) ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ) ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ (ಕೆಲವು ಜಮೀನು ಪರಭಾರೆ: ನಿಷೇದ) ಕಾಯಿದೆ ೧೯೭೮ರ ಪರಿಮಿತಿಯೊಳಗಡೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಎಷ್ಟು ಜನರಿಗೆ ಅವರು ಪರಭಾರೆ ಮಾಡಿದ ಜಮೀನನ್ನು ಹಿಂತಿರುಗಿಸಲಾಗಿದೆ.

ಆ) ಮರು ಮಂಜೂರಾತಿ ವಿಸ್ತೀರ್ಣ.

ಇ) ಈ ಕಾಯಿದೆ ಅನ್ವಯ ಬಂದ ಒಟ್ಟು ಅರ್ಜಿಗಳ ಸಂಖ್ಯೆ.

ಈ) ಈ ಕಾಯಿದೆ ಅನ್ವಯ ಮರು ಮಂಜೂರಾದ ಜಮೀನನ್ನು ಇತ್ತೀಚಿನ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ೧೨ ವರ್ಷಗಳ ಸ್ವಾಧೀನಾನುಭವದಲ್ಲಿರುವ ಕ್ರಯದಾರರಿಗೆ ಅಪೀಲಿನಲ್ಲಿ ಪುನಃ ಸ್ವಾಧೀನ ಕೊಡಿಸಿರುವ ಬಗ್ಗೆ ಸರಕಾರಕ್ಕೆ ತಿಳಿದಿದೆಯೇ ?

ಉ) ಸರ್ಕಾರದಿಂದ ಮೇಲ್ಕಂಡ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಹಿತಾಶಕ್ತಿ ಕಾಪಾಡಲು ತೆಗೆದುಕೊಂಡ ಕ್ರಮ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ೧೧,೩೯೧ ಜನರು.

ಆ) ೩೩,೪೭೭ ಎಕರೆ ೧೦ ಗುಂಟೆ.

ಇ) ೨೮,೯೦೨ ಅರ್ಜಿಗಳು.

ಈ) ಹೌದು.

ಉ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

LAND SANCTIONED BY LAND TRIBUNALS

280 (353) Sri B. S. YEDIYURAPPA (Shikaripura).—will the Minister for Revenue and planning be pleased to state:—

A) Is it a fact, that the Government has declared that a tenant who gets 10 acres of land under Karnataka Land Reforms Act need not pay any premium to Government by such tenants, if so, the date in which the Government order was issued ?

B) Whether exemption is granted to such of tenant who have raised loan from PLD Bank for payment of premium to Government.

C) Whether it has come to the notice of Government that the PLD Banks have issued instructions to destrin the properties of ex-tenants who have not paid the loan ?

SRI S. R. BOMMAI (Minister for Revenue and Planning).—

A) Yes. Those ex-tenants who have been conferred with occupancy rights and whose total holding of 'D' Class land including the former tenanted land as owner does not exceed 10 acres, then such ex-tenants need not pay future instalment of premium. In this connection, Circular instructions have been issued on 6-11-84 to all the Deputy Commissioners.

B) Since these benefits come into effect in future, it is not applicable to old payment.

C) No.